# ಸಂಗೀತ ಕಾರ್ಯಕ್ರಮ



ಧಾರವಾಡ: ಸಂಗೀತದಲ್ಲಿ ಭಾವನೆಗಳನ್ನು ಅರಳಿಸುವ ದಿವ್ಯ ಶಕ್ತಿ ಇರುವಂತೆ ದುಃಖವನ್ನು ಮರೆಸುವ ಶಕ್ತಿ ಇದೆ. ಸಂಗೀತಕ್ಕೆ ಒಲಿಯದವನು ಮನುಷ್ಯನೇ ಅಲ್ಲ. ಸಂಗೀತಕ್ಕೆ ಒಲಿಯದ ಮನಸ್ಸೇ ಇಲ್ಲಾ ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ ಮರಾಠಿ ವಿಭಾಗದ ಮುಖ್ಯಸ್ಥರಾದ ಡಾ. ಅಮೃತ ಯಾರ್ದಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಕಲಾ ಮಂಟಪವು, ಮಹಾತ್ಮಾ ಗಾಂಧೀಜಿಯವರ ೭೧ ನೇಯ ಪುಣ್ಯ ತಿಥಿ ಅಂಗವಾಗಿ ದಿನಾಂಕ ೩೦-೧-೨೦೧೯ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದ ಅತಿಥಿಗಳಾಗಿ ಮಾತನಾಡಿ, ಧಾರವಾಡವು ಸಂಗೀತ ಹಾಗೂ ಸಾಹಿತ್ಯ ಸಾಧಕರಿಗೆ ಸ್ವರ್ಗ. ಮನವೆಂಬ ಮರ್ಕಟವನ್ನು ಕಟ್ಟಿ ಹಾಕುವ ದಿವ್ಯ ಶಕ್ತಿ ಸಂಗೀತಕ್ಕಿದೆ. ಸಪ್ತಸ್ವರದಲ್ಲಿ ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಅದಮ್ಯತೆ ಇದೆ. ಸಂಗೀತ ಸಾಧಕರಿಗೆ ತಮ್ಮ ಗುರುಗಳ ಬಗ್ಗೆ ಗೌರವಾದರಗಳ ಜೊತೆಗೆ  ಸಹಾನುಭೂತಿಯು ಅತ್ಯಗತ್ಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪಂ. ಶ್ರೀಪಾದ ಹೆಗಡೆ ಮಾತನಾಡಿ, ನಾವು ವೃತ್ತಿಯಿಂದ ಯಾವುದೇ ಕಾಯಕ ಮಾಡಿದರೂ ಪ್ರವೃತ್ತಿಯಲ್ಲಿ ಸಂಗೀತಾಸಕ್ತರಾಗಿರಬೇಕು. ಮಹಾತ್ಮಾ ಗಾಂಧೀಜಿಯವರಿಗೆ ಸಂಗೀತದ ಬಗ್ಗೆ ಬಹಳ ಆಸಕ್ತಿ ಇತ್ತು. ತಮ್ಮ ಸಾಬರಮತಿ ಆಶ್ರಮದಲ್ಲಿ ಮತ್ತು ಕಾಂಗ್ರೇಸ್ ಅಧಿವೇಶನಗಳಲ್ಲಿ ಸಂಗೀತ ಕಾರ್ಯಕ್ರಮ ಏರ್ಪಡಿಸಿ, ಕೇಳಿ ಆನಂದ ಪಡುತ್ತಿದ್ದರು. ಸಂಗೀತವು ಭಾಷೆ ಪ್ರಧಾನವಲ್ಲ, ಭಾವನಾ ಪ್ರಧಾನವಾಗಿದೆ. ದಾಸ ಸಾಹಿತ್ಯವು ಸಂಗೀತದ ಮೂಲಕ ಸುಳಾದಿಗಳಿಂದ ಜನಮನದಲ್ಲಿ ನೆಲೆಯುರಿತ್ತು. ಸಂಗೀತಕ್ಕೆ ಮನಸೋಲದ ಮನಸ್ಸುಗಳೇ ಇಲ್ಲ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿ, ಸತ್ಯ, ಶಾಂತಿ, ಅಹಿಂಸೆಯಲ್ಲಿ ಅಚಲ ನಂಬಿಕೆ ಹೊಂದಿದ್ದ ಗಾಂಧೀಜಿಯವರು ಸತ್ಯಾಗ್ರಹ ಎಂಬ ನೈತಿಕ ಆಯುಧದ ಮೂಲಕ ಸ್ವಾತಂತ್ರ್ಯ ತಂದು ಕೊಟ್ಟರು. ಮಾನವೀಯತೆ ಸರಳತೆ ಸತ್ಯಸಂಧತೆಯ ಮೂಲಕ ಅದ್ವಿತೀಯ ನಾಯಕರೆನಿಸಿಕೊಂಡರು. ಅವರು ಸಾಮಾಜಿಕ ಸುಧಾರಕರಷ್ಟೇ ಅಲ್ಲ ಆರ್ಥಿಕ ಸುಧಾರಕರೂ ಆಗಿದ್ದರು. ಅವರ ಸ್ಮರಣೆ ನಮಗೆಲ್ಲಾ ಸ್ಫೂರ್ತಿದಾಯಕವಾದದ್ದು ಎಂದರು.

ಯುವ ಗಾಯಕರಾದ ವಿವೇಕ ಹೆಗಡೆ ಸಂಗೀತ ಕಾರ್ಯಕ್ರಮ ನೆರವೇರಿಸಿದರು. ಇವರಿಗೆ ಅಲ್ಲಮಪ್ರಭು ಕಡಕೋಳ ತಬಲಾ ಹಾಗೂ ಪರಶುರಾಮ ಕಟ್ಟಿಸಂಗಾವಿ ಹಾರ್ಮೋನಿಯಂ ಸಾಥ್ ನೀಡಿದರು. ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು.

ಪ್ರಾರಂಭದಲ್ಲಿ ಮಾಜಿ ರಕ್ಷಣಾ ಸಚಿವ ಹಾಗೂ ಕಾರ್ಮಿಕ ಧುರೀಣ, ಹಿರಿಯ ಮುತ್ಸದ್ಧಿ ರಾಜಕಾರಣಿಗಳಾದ ಜಾರ್ಜ್ ಫರ್ನಾಂಡಿಸ್ ಅವರ ನಿಧನಕ್ಕೆ ದುಖಃ ಸಂತಾಪ ಸೂಚಿಸಿ, ೨ ನಿಮಿಷ ಮೌನ ಆಚರಿಸಲಾಯಿತು. ಕಲಾ ಮಂಟಪದ ಸಂಚಾಲಕರಾದ ಶಂಕರ ಕುಂಬಿ ಸ್ವಾಗತಿಸಿದರು. ಉಪನ್ಯಾಸಕ ವೀರಣ್ಣ ಒಡ್ಡೀನ ನಿರೂಪಿಸಿದರು. ಮೇಘನಾ ಹುಕ್ಕೇರಿ ವಂದಿಸಿದರು.

ಕಾರ್ಯಕ್ರಮದಲ್ಲಿ ಡಾ. ಮಲ್ಲಿಕಾರ್ಜುನ ತರ್ಲಘಟ್ಟ, ಶಕ್ತಿ ಪಾಟೀಲ, ಡಾ. ಶಾಂತಾರಾಮ ಹೆಗಡೆ, ಕೆ.ಎಂ. ಅಂಗಡಿ, ಮಹೇಶ ಕುಲಕರ್ಣಿ, ಬಿ.ಕೆ. ಹೊಂಗಲ್, ಚನ್ನಬಸಪ್ಪ ಅವರಾದಿ ಇತರರು ಇದ್ದರು.

**ಶಂಕರ ಕುಂಬಿ**
ಸಂಚಾಲಕರು, ಕಲಾ ಮಂಟಪ
ಮೊ: ೯೪೪೮೮-೦೧೧೪೧